**Tribute to Prof. M. S. Swaminathan,**

**Father of Indian Green Revolution and Founder Chairman of MSSRF, Chennai**


***

**Setu Bandha Trust, Karki**

**Tal: Honnavar, Uttara Kannada District, Karnataka - 581341**

A condolence meeting was held on October 3, 2023 at the Computer Training Centre of the Setu Bandha Trust, Karki, I Uttara Kannada district of Karnataka to offer tribute to Prof. M. S. Swaminathan, a world renowned Agricultural Scientist and the Indian Green Revolution, who passed away on September 28, 23. The programme was attended by a large number of villagers, including the teachers and students of the local schools. While offering homage, some the participants spoke about the contribution of Professor Swaminathan to the progress of the nation and his generous support to Setu Bandha Trust to construct and establish a Computer Training Centre at Karki, with his financial support under the MPLAD fund.

Mr. R. S. Joshi, Treasurer of the Setu Bandha Trust recited a couplet constructed by him about Prof. Swaminathan, as presented below:



**Translation in English:**

**Our Respected Dr. Swaminathan**

In the field of Agriculture

Name of Prof. Swaminathan became immortal l1l

In spite of the population explosion

Mother India relaxed and took a deep breath l2l

In spite of receiving 84 honorary doctorates

He did not have even a slightest feeling of pride l3l

But in the shade of his support through his gift

It was a great beginning of the Setu Bandha era l4l

In 2012, Prof. Swaminathan donated Rs. 25 lakhs to the Setu Bandha Trust under the MPLAD funds, through the Primary School of Karki to construct 4 classrooms for the Computer Training

Centre at Karki to enable the trust to impart computer training for primary and secondary school students. This building was inaugurated in April, 2016. Five computers were procured and a teacher was appointed for conducting computer training for students of standards V, VI and VII in five primary schools in the surroundings of Karki. This activity is in operation since 2016. The services of this computer teacher are being provided once a week to each primary school operating under the Karki Gram Panchayat, where the respective school teachers are oriented on computer usage and the students are taught to operate the computer. So far the Computer Training Centre has trained 630 persons in computer operation.

The villagers acknowledged the generous contribution of Prof. Swaminathan and the local newspapers have also published the report of this programme.

**Press Cuttings**

## ಕರ್ಕಿ ಗ್ರಾಮಸ್ಥರಿಂದ ಡಾ.ಸ್ವಾಮಿನಾಥನ್‌ಗೆ ಶ್ರದ್ಧಾಂಜಲಿ

ನುಡಿಜೇನು ವರದಿ



**ಹೊನ್ನಾವರ:** ದೇಶದಲ್ಲಿ ಹಸಿರುಕ್ರಾಂತಿಗೆ ಕಾರಣ–ರಾಗಿ ದೇಶವನ್ನು ಹಸಿವಿನ ದವಡೆಯಿಂದ ಮುಕ್ತವನ್ನಾಗಿಸಿದ ಕೃಷಿ ವಿಜ್ಞಾನಿ ಡಾ.ಸ್ವಾಮಿನಾಥನ್ ಇತ್ತೀಚೆ ನಿಧನರಾಗಿದ್ದು, ಅವರು ಸಂಸದರಾಗಿದ್ದಾಗ ಕರ್ಕಿ ಗ್ರಾಮದ ಬಡವಿದ್ಯಾರ್ಥಿಗಳಿಗಾಗಿ ಉಚಿತ ಕಂಪ್ಯೂಟರ್ ವರ್ಗ ಆರಂಭಿಸಲು ಸಂಸದರ ನಿಧಿಯಿಂದ 25 ಲಕ್ಷ ರೂಪಾಯಿಗಳನ್ನು ನೀಡಿದ್ದರು.

ದೇಶಕ್ಕೆ ಮಹತ್ವದ ಕೊಡುಗೆ ನೀಡಿದ ವ್ಯಕ್ತಿ ಕರ್ಕಿ ಗ್ರಾಮಕ್ಕೆ ಮಾಡಿದ ಉಪಕಾರದಿಂದ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈವರೆಗೆ ಕಂಪ್ಯೂಟರ್ ಕಲಿತು ಉದ್ಯೋಗಿಗಳಾಗಿದ್ದಾರೆ. ಎರಡು ವರ್ಗದ ಕೋಣೆಗಳು ಶಾಲೆಗೆ ಬಳಕೆಯಾಗುತ್ತಿದೆ. ಈ ದೇಣಿಗೆ ಪಡೆಯಲು ಕರ್ಕಿಯವರೇ ಆದ ಚಿಂತಕ, ಲೇಖಕ ನಾರಾಯಣ ಹೆಗಡೆ ಮಾದಪ್ಪನ್ ಕಾರಣ–ರಾಗಿದ್ದಾರೆ ಎಂದು ನಿವೃತ್ತ ಕಂದಾಯ ಅಧಿಕಾರಿ ಮತ್ತು ಸೇತುಬಂಧ ಸಂಸ್ಥೆಯ ಮುಖಾಂತರವಾಗಿ ಕಟ್ಟಡ ನಿರ್ಮಿಸಿ ಕಂಪ್ಯೂಟರ್ ಕ್ಲಾಸಿಗೆ ಕಾರಣರಾದ ಕೆ.ಎಸ್.ಭಟ್ಟ ಹೇಳಿದರು. ರಾಮಚಂದ್ರ ಜೋಶಿ ಮಾತನಾಡಿ ಪದ್ಮವಿಭೂಷಣ ಪ್ರಶಸ್ತಿ ಪಡೆದ ಡಾ. ಸ್ವಾಮಿನಾಥನ್ 80ಕ್ಕೂ ಹೆಚ್ಚು ಡಾಕ್ಟರೇಟ್ ಪಡೆದಿದ್ದರು. ಜಗತ್ತಿನ ಬೇರೆಡೆ ಉದ್ಯೋಗಾವಕಾಶಗಳಿದ್ದರೂ ದೇಶಕ್ಕಾಗಿ ದುಡಿದರು ಎಂದು ಸ್ಮರಿಸಿ ಅವರ ಕುರಿತು ಕವಿತೆ ಓದಿದರು. ಎಸ್.ಆರ್. ಹೆಗಡೆ, ಎಚ್.ಎನ್. ನಾಯ್ಕ ಮೊದಲಾದ ಗಣ್ಯರು, ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು ಡಾ. ಸ್ವಾಮಿನಾಥನ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

# ಕೃಷಿ ವಿಜ್ಞಾನಿ ಡಾ। ಸ್ವಾಮಿನಾಥನ್‌ಗೆ ಶ್ರದ್ಧಾಂಜಲಿ

ಹೊನ್ನಾವರ: ಇತ್ತೀಚೆಗೆ ನಿಧನರಾದ ದೇಶದಲ್ಲಿ ಹಸಿರುಕ್ರಾಂತಿಗೆ ಕಾರಣರಾಗಿ ದೇಶವನ್ನು ಹಸಿವಿನ ದವಡೆಯಿಂದ ಮುಕ್ತವಾಗಿಸಿದ್ದ ಕೃಷಿ ವಿಜ್ಞಾನಿ ಡಾ।ಸ್ವಾಮಿನಾಥನ್ ಅವರಿಗೆ ಕರ್ಕಿ ಗ್ರಾಮಸ್ಥರು ಶ್ರದ್ಧಾಂಜಲಿ ಸಲ್ಲಿಸಿದರು.

ನಿವೃತ್ತ ಕಂದಾಯ ಅಧಿಕಾರಿ ಕೆ.ಎಸ್. ಭಟ್ಟ ಮಾತನಾಡಿ, ಡಾ। ಸ್ವಾಮಿನಾಥನ್ ಅವರು ಸಂಸದರಾಗಿದ್ದಾಗ ಕರ್ಕಿ ಗ್ರಾಮದ ಬಡವಿದ್ಯಾರ್ಥಿಗಳಿಗಾಗಿ ಉಚಿತ ಕಂಪ್ಯೂಟರ್ ವರ್ಗ ಆರಂಭಿಸಲು ಸಂಸದರ ನಿಧಿಯಿಂದ 25 ಲಕ್ಷ ರೂ. ನೀಡಿದ್ದರು. ದೇಶಕ್ಕೆ ಮಹತ್ವದ ಕೊಡುಗೆ ನೀಡಿದ ವ್ಯಕ್ತಿ ಕರ್ಕಿ ಗ್ರಾಮಕ್ಕೆ ಮಾಡಿದ ಉಪಕಾರದಿಂದ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈವರೆಗೆ ಕಂಪ್ಯೂಟರ್ ಕಲಿತು ಉದ್ಯೋಗಿಗಳಾಗಿದ್ದಾರೆ. ಎರಡು ವರ್ಗದ ಕೋಣೆಗಳು ಶಾಲೆಗೆ ಬಳಕೆಯಾಗುತ್ತಿದೆ. ಈ ದೇಣಿಗೆ ಪಡೆಯಲು ಕರ್ಕಿಯವರೇ ಆದ ಚಿಂತಕ, ಲೇಖಕ ನಾರಾಯಣ ಹೆಗಡೆ ಮಾದಪ್ಪನ್ ಕಾರಣರಾಗಿದ್ದಾರೆ ಎಂದರು.

ರಾಮಚಂದ್ರ ಜೋಶಿ ಮಾತನಾಡಿ ಪದ್ಮವಿಭೂಷಣ ಪ್ರಶಸ್ತಿ ಪಡೆದ ಡಾ। ಸ್ವಾಮಿನಾಥನ್ 80 ಕ್ಕೂ ಹೆಚ್ಚು ಡಾಕ್ಟರೇಟ್ ಪಡೆದಿದ್ದರು. ಜಗತ್ತಿನ ಬೇರೆಡೆ ಉದ್ಯೋಗಾವಕಾಶಗಳಿದ್ದರೂ ದೇಶಕ್ಕಾಗಿ ದುಡಿದರು ಎಂದು ಸ್ಮರಿಸಿ ಅವರ ಕುರಿತು ಕವಿತೆ ಓದಿದರು. ಎಸ್.ಆರ್. ಹೆಗಡೆ, ಎಚ್.ಎಸ್. ನಾಯ್ಕ ಮೊದಲಾದ ಗಣ್ಯರು, ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು ಡಾ। ಸ್ವಾಮಿನಾಥನ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.



ಹೊನ್ನಾವಾರ: ಕರ್ಕಿ ಗ್ರಾಮಸ್ಥರಿಂದ ಡಾ। ಸ್ವಾಮಿನಾಥನ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

# ಡಾ.ಸ್ವಾಮಿನಾಥನ್ ಸ್ಮರಣೆ, ಬಣ್ಣದಲ್ಲೇ ಸೀರೆ ಉಡಿಸುವ ಗಣೇಶ ಶೆಟ್ಟಿ

▪ ಶಿರಸಿ ಸಮಾಚಾರ

ಪ್ರಭು, ಭಾರತ ಆಹಾರದ ಕೊರತೆಯಿಂದ ಆರ್ಥಿಕ ಬಿಕ್ಕಟ್ಟಿಗೊಳಗಾದಾಗ ಡಾ. ಸ್ವಾಮಿನಾಥನ್‌ನವರು ಹಸಿರುಕ್ರಾಂತಿಗೆ ಕಾರಣರಾಗಿ ಭಾರತವನ್ನು ಹಸಿವಿನದವಡೆಯಿಂದ ತಪ್ಪಿಸಿದ್ದರು.




ಜಗತ್ತಿನ ಬೇರೆಬೇರೆ ರಾಷ್ಟ್ರಗಳಲ್ಲಿ ಅವಕಾಶಗಳಿದ್ದರೂ ಭಾರತಕ್ಕಾಗಿ ದುಡಿದರು. ವಿಶ್ವ ಆಹಾರ ಪ್ರಶಸ್ತಿ, ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ ಪಡೆದ ಸ್ವಾಮಿನಾಥನ್‌ರಿಗೆ 84 ಗೌರವ ಡಾಕ್ಟರೇಟ್‌ಗಳಿದ್ದವು. ಅವರು ತಮ್ಮ 98ನೇ ವರ್ಷದಲ್ಲಿ ಇಹಲೋಕ ತ್ಯಜಿಸಿದ್ದಾರೆ. ಅವರು ರಾಜ್ಯಸಭಾ ಸದಸ್ಯರಾಗಿದ್ದಾಗ ಕರ್ಕಿಯಲ್ಲಿ ಬಡ ಯುವಕ-ಯುವತಿಯರಿಗಾಗಿ ಉಚಿತ ಕಂಪ್ಯೂಟರ್ ಕ್ಲಾಸ್ ತೆರೆಯಲು 2014ರಲ್ಲಿ 25 ಲಕ್ಷ ರೂಪಾಯಿ ಸಂಸದ ನಿಧಿ ನೀಡಿದ್ದರು. 2015 ರಿಂದ 600ಕ್ಕೂ ಹೆಚ್ಚು ಮಕ್ಕಳು ಇಲ್ಲಿ ತರಬೇತಿ ಪಡೆದಿದ್ದು, ಕರ್ಕಿಯ ಸೇತುಬಂಧ ಟ್ರಸ್ಟ್ ಇದರ ನಿರ್ವಹಣೆ ಮಾಡುತ್ತಿದೆ.

ಕರ್ಕಿಯವರಾದ ನಾರಾಯಣ ಗಣಪ ಹೆಗಡೆ ಮಾದಪ್ಪನ್ ಮತ್ತು ಡಾ. ಸ್ವಾಮಿನಾಥನ್ ಇವರ ಸ್ನೇಹ ಬಾಂಧವ್ಯದಿಂದಾಗಿ ಈ ಕೊಡುಗೆ ಬಂದಿದೆ. ನಾರಾಯಣ ಹೆಗಡೆ ವಿಜ್ಞಾನದಲ್ಲಿ ಉನ್ನತ ಪದವಿ ಪಡೆದು ಗಾಂಧೀಜಿಯವರ ಶಿಷ್ಯ ಮಣಿಭಾಯಿ ಶಾಹ ಇವರಿಂದ ಸ್ಫೂರ್ತಿ ಪಡೆದು ಅವರು ಮಹಾರಾಷ್ಟ್ರದ ಉರಳಿ ಕಾಂಚನದಲ್ಲಿ ಸ್ಥಾಪಿಸಿದ ಬೈಫ್ ಸಂಸ್ಥೆಯ ಧರ್ಮದರ್ಶಿ ಮತ್ತು ಸಲಹೆಗಾರರಾಗಿ ದುಡಿದ್ದಿದ್ದಾರೆ. ಬೈಫ್ ಸಂಸ್ಥೆ ಭಾರತದಲ್ಲಿ ಕೃಷಿ ಮತ್ತು ಹೈನುಗಾರಿಕೆಯ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದೆ. ಕರ್ಕಿಯಲ್ಲಿ ಹಿರಿಯ ಸಾಮಾಜಿಕ ಕಾರ್ಯಕರ್ತ ಕೆ.ಎಸ್. ಭಟ್ ಮತ್ತು ಇತರ ಸ್ನೇಹಿತರ ಸಹಾಯದಿಂದ ಸೇತುಬಂಧ ಟ್ರಸ್ಟ್ ಸ್ಥಾಪಿಸಿಕೊಂಡು ಹಲವಾರು ಕೆಲಸ ಮಾಡುತ್ತಿರುವ ಎನ್.ಜಿ. ಹೆಗಡೆ ಉತ್ತಮ ಬರಹಗಾರರೂ ಹೌದು. ಅವರು ಬರೆದ 'ಗ್ರಾಮೀಣಾಭಿವೃದ್ಧಿಗೆ ಗಾಂಧಿ ಮಾರ್ಗ' ಕೃತಿಯನ್ನು



ನಾರಾಯಣ ಹೆಗಡೆ ಪುಸ್ತಕ ಬಿಡುಗಡೆ ಮಾಡುತ್ತಿರುವ ಡಾ. ಸ್ವಾಮಿನಾಥನ್ ಮತ್ತು ಗೋಪಾಲಕೃಷ್ಣ ಗಾಂಧಿ.

ಡಾ. ಸ್ವಾಮಿನಾಥನ್ ಮತ್ತು ಗಾಂಧೀಜಿ ಮತ್ತು ರಾಜಾಜಿಯವರ ಮೊಮ್ಮಗ ಮಾಜಿ ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ ಬಿಡುಗಡೆಗೊಳಿಸಿದ್ದಾರೆ. ಡಾ. ಸ್ವಾಮಿನಾಥನ್‌ನವರ ಗುಣ ಮತ್ತು ಅವರು ಭಾರತಕ್ಕೆ ನೀಡಿದ ಕೊಡುಗೆಗಳ ಕುರಿತು ಸ್ಮರಿಸಿದ ನಾರಾಯಣ ಹೆಗಡೆ ಅವರ ಚಿಂತನೆಗಳಿಂದ ತಾವು ಪ್ರಭಾವಿತರಾಗಿರುವದಾಗಿ ಹೇಳಿದ್ದಾರೆ.

---

ಚೌತಿ ಹಬ್ಬ ಬರುವಾಗ ಜಿಲ್ಲೆಯಲ್ಲಿ ದೊಡ್ಡ ಸುದ್ದಿ ಮಾಡುವವರಲ್ಲಿ ಜಿ.ಡಿ. ಭಟ್ ಕೆಕ್ಕಾರ ಮತ್ತು ಗಣೇಶ ಶೆಟ್ಟಿ ಪ್ರಮುಖರು. ಜಿ.ಡಿ. ಭಟ್



ಬಣ್ಣದಲ್ಲೇ ಸೀರೆ ಉಡಿಸುತ್ತಿರುವ ಗಣೇಶ ಶೆಟ್ಟಿ.

ತಯಾರಿಸುವ ಮಣ್ಣಿನ ಮೂರ್ತಿಗೆ ಬಣ್ಣ ಕೊಟ್ಟು ಜೀವ ಕಳೆ ತರುವ ಕೆಲಸವನ್ನು ಗಣೇಶ ಶೆಟ್ಟಿ ಮತ್ತು ಅವರ ಸಹೋದರ ರಾಮಚಂದ್ರ ಶೆಟ್ಟಿ ಮಾಡುತ್ತ ಬಂದಿದ್ದಾರೆ. ಅಚ್ಚುಕಟ್ಟಾದ ಮೂರ್ತಿ ರಚನೆ ಮತ್ತು ಮಣ್ಣನ್ನು ತಿದ್ದಿತೀಡಿ ಸುಂದರ ಆಕಾರ ಕೊಡುವ ಜಿ.ಡಿ. ಭಟ್ ಕಲೆಯ ವಿವಿಧ ಕ್ಷೇತ್ರದಲ್ಲಿ ಸಿದ್ಧಿ ಪಡೆದುಕೊಂಡವರು. ಇವರ ನೆರಳನಂತೆ ಗಾಢವಾದ ಸ್ನೇಹದೊಂದಿಗೆ ದುಡಿಯುವ ಶೆಟ್ಟಿ ಸಹೋದರರಿಗೆ ಗಣಪತಿಗೆ ಉಡಿಸುವ ಬಟ್ಟೆ, ಆಭರಣಗಳನ್ನು ಬಣ್ಣದಿಂದಲೇ ರೂಪಿಸುವ ಉತ್ಸಾಹ. ಇವರು ಬಣ್ಣ ಹಚ್ಚಿದ ಮೇಲೆ ಬಟ್ಟೆ ಮೂರ್ತಿಗೆ ಉಡಿಸಿದ್ದೋ ಅಥವಾ ಬಣ್ಣದಿಂದಲೇ ತೊಡಿಸಿದ್ದೋ ಅನುಮಾನ ಬಂದು ನೋಡುಗರು ಪಂಥ ಕಟ್ಟುವ್ವದು ಇದೆ. ಜಿ.ಡಿ. ಭಟ್‌ರೇ ಕೊನೆಗೆ ಸ್ಪಷ್ಟೀಕರಣ ಕೊಡುತ್ತಾರೆ. ಈಬಾರಿ ಜಿ.ಡಿ. ಭಟ್‌ರ ಪಾರ್ವತಿಗೆ ಗಣೇಶ ಶೆಟ್ಟಿ ಬಣ್ಣದಲ್ಲೇ ನೈಜವಾಗಿ ಕಾಣುವಂತೆ ಸೀರೆ ಉಡಿಸಿದ್ದಾರೆ! ಛಾಯಾಗ್ರಾಹಕರೂ, ಉತ್ತಮ ಚಿತ್ರಕಾರರೂ ಆಗಿರುವ ಇವರಿಗೆ ಗಣ್ಯರ ಚಿತ್ರಗಳನ್ನು ಬರೆದು ಉಚಿತ ಕಾಣಿಕೆಯಾಗಿ ಕೊಡುವ ಹವ್ಯಾಸವಿದೆ. ಇವರ ಪ್ರತಿಭೆಯನ್ನು ಅಳೆಯಲಾಗದು. ಜಿಲ್ಲೆಯಲ್ಲಿ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂಬ ಮಾತಿಗೆ ನೂರಾರು ಇಂತಹ ಸಾಕ್ಷಿಯಿದೆ.

**ಸರ್ವಾರ್ಥ ಸಹಭಾಗಿತೆಗೆ ರಾಷ್ಟ್ರ ಕುಲ ವರ್ಗ ।**
**ಸರ್ವದಾ ತಾನೆನುತ್ತೋರೊರ್ವ ಮನುಜನ್ ॥**
**ಸರ್ವಜೀವ ಸಮೃದ್ಧಿಗನುಗೂಡಿ ದುಡಿಯುತಿರೆ ।**
**ಪರ್ವವಂದಿಳೆಗೆಲ್ಲವೂ -ಮಂಕುತಿಮ್ಮ ॥**

ದೇಶದ ಹಸಿರು ಕ್ರಾಂತಿಯ ಹರಿಕಾರ, ದೇಶವನ್ನು ಹಸಿವಿನಿಂದ ಪಾರು ಮಾಡಿದ ಡಾ.ಸ್ವಾಮಿನಾಥನ್ ಇವರಿಗೆ ಊರ ಹಿರಿಯರಾದ ಶ್ರೀ ಕೆ.ಎಸ್.ಭಟ್ಟರ ನೇತೃತ್ವದಲ್ಲಿ ಕರ್ಕಿಯ ಗಣ್ಯರು ಶ್ರದ್ಧಾಂಜಲಿ ಅರ್ಪಿಸಿದರು.ಡಾ.ಸ್ವಾಮಿನಾಥನ್ ಸಂಸದರಾಗಿದ್ದಾಗ ಅವರ ಆತ್ಮೀಯರಾದ ಎನ್.ಜಿ ಹೆಗಡೆ,ಮಾದಪ್ಪನ್ ಕರ್ಕಿ ಇವರು ವಿನಂತಿಯಂತೆ 25 ಲಕ್ಷರೂಪಾಯಿಗಳನ್ನು ಸೇತುಬಂಧ ಟ್ರಸ್ಟ್ ಗೆ ನೀಡಿದ್ದಾರೆ.ಆ ಹಣದಲ್ಲಿ ಬಡವರಿಗಾಗಿ ಕಟ್ಟಡ ನಿರ್ಮಿಸಿ ಉಚಿತ ಕಂಪ್ಯೂಟರ್ ವರ್ಗನಡೆಸುತ್ತಿದ್ದು..600 ವಿದ್ಯಾರ್ಥಿಗಳು ತರಬೇತಿ ಪಡೆದಿದ್ದಾರೆ! ಎಲ್ಲಿಯ ಸ್ವಾಮಿನಾಥನ್,ಎಲ್ಲಿಯ ಕರ್ಕಿ ಬಡಯುವಕರು!



**Report Prepared By:**

Mr. K. S. Bhat, Organizing Secretary and Mr. R. S. Joshi, Treasurer

Setu Bandha Trust, Computer Training Centre, Primary School Premise, Karki 581341